## ಸಿಸಿ ಸಂಃ 1728/2017

## 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಹೊಸಕೋಟೆ

| | |
|---|---|
| ಸಾಕ್ಷಿದಾರರ ಹೆಸರು : ಅಮೃತ | ಪಿ ಡಬ್ಲ್ಯೂ - 5 ಸಿ ಡಬ್ಲ್ಯೂ - 2 |
| ತಂದೆ ಹೆಸರುಃ ಮುನಿಯಪ್ಪ | ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿ: **28.08.2025** |
| ವಯಸ್ಸುಃ 24 ವರ್ಷ | |
| ವೃತ್ತಿಃ ಗೃಹಿಣಿ | |
| ವಾಸ ಸ್ಥಳಃಪಾಂಡವಪುರ, ಮಂಡ್ಯ. | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ**

ನನಗೆ ಚಾ.ಸಾ.1, 3 ಮತ್ತು 4 ರವರ ಪರಿಚಯವಿರುತ್ತದೆ. ಚಾ.ಸಾ.1 ನನ್ನ ತಾಯಿಯಾಗಬೇಕು. ನನಗೆ ಆರೋಪಿತರ ಪರಿಚಯ ಇರುತ್ತದೆ. ದಿ:13.03.2017 ರಂದು ಸಂಜೆ 6:00 ಗಂಟೆ ಸಮಯದಲ್ಲಿ ನಾನು ಮತ್ತು ಚಾ.ಸಾ.1 ರವರು ನೀರು ಹಿಡಿಯಲು ನಮ್ಮ ಊರಲ್ಲಿರುವ ಬೋರ್ ವೆಲ್ ಬಳಿ ಹೋಗಿ ಸಾಲಿನಲ್ಲಿ ತುಂಬಾ ಹೊತ್ತು ನಿಂತಿರುತ್ತೇವೆ, ನಮ್ಮ ಸರದಿ ಬಂದಾಗ ನೀರು ಹಿಡಿಯಲು ನಾನು ಮತ್ತು ತಾಯಿ ಹೋದಾಗ, 1 ನೇ ಆರೋಪಿ ನೀರು ಹಿಡಿಯಲು ಬಂದಿರುತ್ತಾರೆ. ಆ ಸಮಯದಲ್ಲಿ ಚಾ.ಸಾ.1 ರವರು ನಾವು ನೀರು ಹಿಡಿಯಲು ಸರದಿಯಲ್ಲಿ ತುಂಬಾ ಹೊತ್ತಿನಿಂದ ನಿಂತಿರುತ್ತೇವೆ, ಸ್ವಲ್ಪ ಹೊತ್ತು ನೀವು ಸಹ ನಿಂತುಕೊಳ್ಳಿ ಎಂದು ಹೇಳಿದಾಗ, 1 ನೇ ಆರೋಪಿ ಚಾ.ಸಾ.1 ರವರ ಕೈಯಲ್ಲಿದ್ದ ಬಿಂದಿಗೆಯನ್ನು ಬಿಸಾಕುತ್ತಾರೆ ಮತ್ತು ಚಾ.ಸಾ.1 ಮತ್ತು 1 ನೇ ಆರೋಪಿ ಜಗಳ ಮಾಡಿಕೊಳ್ಳುತ್ತಾರೆ, ಆ ಸಮಯದಲ್ಲಿ 2 ನೇ ಆರೋಪಿ ಪಕ್ಕದಲ್ಲಿ ಟಮೋಟ ಕಡ್ಡಿಯನ್ನು ನೆಡುತ್ತಿದ್ದರು, ಏಕಾಏಕಿ ಬಂದು, 2 ನೇ ಆರೋಪಿ ಚಾ.ಸಾ.1 ರವರಿಗೆ ಹಣೆಗೆ, ಕೈಗಳಿಗೆ, ಭುಜಕ್ಕೆ ನೀಲಗಿರಿ ಮರದ ದೊಣ್ಣೆಯಿಂದ ಹೊಡೆಯುತ್ತಾರೆ, ಆ ಸಮಯದಲ್ಲಿ ನಮ್ಮ ಅಮ್ಮ ಸ್ಥಳದಲ್ಲಿ ಬಿದ್ದು ಹೋಗುತ್ತಾರೆ,

ಅದನ್ನು ತಡೆಯಲು ಹೋದ ನನಗೆ ತಲೆಗೆ ಮತ್ತು ಎರಡೂ ಕೈಗಳಿಗೂ ದೊಣ್ಣೆಯಿಂದ ಏಟು ಬಿದ್ದಿರುತ್ತದೆ ಮತ್ತು ನನ್ನ ತಲೆಯಿಂದ ರಕ್ತಸ್ರಾವ ಆಗಿರುತ್ತದೆ. ನಂತರ ನಾವು ನಂದಗುಡಿ ಪೋಲಿಸ್ ಠಾಣೆಗೆ ದೂರು ನೀಡಲು ಹೋದಾಗ, ನಂದಗುಡಿ ಪೋಲಿಸ್ ಠಾಣೆಯಲ್ಲಿ ಇದು ಮೆಂಬರ್ ಮಂಜುನಾಥ್ ರವರ ಕೇಸು ಅದನ್ನು ತೆಗೆದುಕೊಳ್ಳಬೇಡಿ ಎಂದು ನಮಗೆ ಪೋಲಿಸರು ಹೇಳಿರುತ್ತಾರೆ. ನಂತರ ನಾನು ಮತ್ತು ನನ್ನ ಅಮ್ಮ ನಂದಗುಡಿ ಸರ್ಕಾರಿ ಆಸ್ಪತ್ರಗೆ ಚಿಕಿತ್ಸೆ ಪಡೆಯಲು ಹೋಗಿರುತ್ತೇವೆ. ನಂತರ ವೈದ್ಯರ ಹೇಳಿಕೆಯ ಮೇರೆಗೆ ನಂದಗುಡಿ ಪೋಲಿಸ್ ಠಾಣೆಯವರು ನಮ್ಮ ದೂರನ್ನು ಪಡೆದುಕೊಂಡಿರುತ್ತಾರೆ. ಹಲ್ಲೆಯ ಸಮಯದಲ್ಲಿ ನಮ್ಮ ಅಮ್ಮನ ಕರಿಮಣಿ ಸರ ಕೂಡ ಕಿತ್ತುಹೋಗಿರುತ್ತದೆ, ದೊಣ್ಣೆಯನ್ನು ಮತ್ತು ಕರಿಮಣಿ ಸರವನ್ನು ಪೊಲಿಸ್ ಠಾಣೆಗೆ ನೀಡಿರುತ್ತೇವೆ. ಹಲ್ಲೆಯ ಸಮಯದಲ್ಲಿ ನಾನು ಹಾಕಿಕೊಂಡಂತಹ ಶರ್ಟ್ ಪೂರ್ತಿಯಾಗಿ ರಕ್ತದಲ್ಲಿ ಮುಳುಗಿತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಮು.ಮಾಲು-1 ಅನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ:</u>**

ದಿ:13.03.2017 ರಲ್ಲಿ ನಾನು ಪಿ.ಯು.ಸಿ ವ್ಯಾಸಂಗ ಮಾಡುತ್ತಿದ್ದೆ. ನಾನು ಹೊಸಕೋಟೆ ಸರ್ಕಾರಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದೆ. ನಾನು ಕಾಲೇಜಿಗೆ ಬೆಳಗ್ಗೆ ಹೋಗಿ ಸಂಜೆ 4:00 ವಾಪಸ್ ಬರುತ್ತಿದ್ದೆ. ದಿ:13.03.2017 ರಲ್ಲಿ ಚಾ.ಸಾ.1 ರವರು ಎಂ.ವಿ.ಜೆ ಆಸ್ಪತ್ರೆಯಲ್ಲಿ ವಾರ್ಡ್ ಗರ್ಲ್ ಆಗಿ ಕೆಲಸ ನಿರ್ವಹಿಸುತ್ತಿದ್ದರು. ನಮ್ಮ ತಾಯಿಗೆ ಶಿಫ್ಟ್ ಇರುತ್ತಿದ್ದು, ಆ ದಿನ ನಮ್ಮ ತಾಯಿ ಬೆಳಗಿನ ಶಿಫ್ಟ್ ಮುಗಿಸಿ ಬಂದಿದ್ದರು. ಆ ದಿನ ನಮ್ಮ ತಾಯಿಗೆ ಬೆಳಗಿನ ಶಿಫ್ಟ್ ಇತ್ತು ಎಂದು

ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಲಿಂಗಾಪುರ ಗ್ರಾಮದಲ್ಲಿ ಸಾರ್ವಜನಿಕವಾಗಿ ನೀರು ಹಿಡಿಯಲು ಮೂರು ಕಡೆ ಇರುತ್ತದೆ, ಸಾಕ್ಷಿ ಮುಂದುವರೆದು, ಒಂದು ಬೋರ್ ವೆಲ್ ಮತ್ತು ಎರಡು ಟ್ಯಾಂಕ್ ಇರುತ್ತದೆ ಎಂದು ನುಡಿಯುತ್ತಾರೆ. ನಾರಾಯಣಸ್ವಾಮಿ ಅವರ ಮನೆಯ ಪಕ್ಕದಲ್ಲಿರುವ ಬೋರ್ ವೆಲ್ ಗೆ ನಾವು ಆ ದಿನ ನೀರು ಹಿಡಿಯಲು ಹೋಗಿದ್ದೆವು. ನಮ್ಮ ಮನೆಯಿಂದ ನಾರಾಯಣಸ್ವಾಮಿ ಅವರ ಮನೆಯ ಪಕ್ಕದಲ್ಲಿರುವ ಬೋರ್ ವೆಲ್ ಗೆ 3 ಮೀ. ಆಗುತ್ತದೆ, ಸದರಿ ಬೊರ್ ವೆಲ್ ಎಲೆಕ್ಟ್ರಿಕ್ ಬೊರ್ ವೆಲ್ ಆಗಿರುತ್ತದೆ. ನಾವು ನೀರು ಹಿಡಿಯಲು ಹೋದಾಗ ಸರದಿಯಲ್ಲಿ 10 ಜನ ನೀರು ಹಿಡಿಯಲು ನಿಂತಿದ್ದರು. ಸದರಿ 10 ಜನರ ಹೆಸರು ನನಗೆ ತಿಳಿದಿರುತ್ತದೆ. ನಾನು ನನ್ನ ಹೇಳಿಕೆಯಲ್ಲಿ ಸರದಿಯಲ್ಲಿ 10 ಜನ ನಿಂತಿದ್ದರು ಮತ್ತು ಅವರ ಹೆಸರುಗಳು ಗೊತ್ತು ಎಂದು ಹೇಳಿರುವುದಿಲ್ಲ.

ನಮ್ಮ ತಾಯಿ ಆ ದಿನ ಮಾಮುಲೀ 20 ಲೀ. ಪ್ಲಾಸ್ಟಿಕ್ ಬಿಂದಿಗೆಯನ್ನು ತೆಗೆದುಕೊಂಡು ಹೋಗಿದ್ದರು. 1 ನೇ ಆರೋಪಿ ತಂದಿದ್ದ ಬಿಂದಿಗೆಯ ಬಣ್ಣ ಹಸಿರಾಗಿರುತ್ತದೆ. ನನ್ನ ತಾಯಿ ತಂದಿದ್ದ ಬಿಂದಿಗೆಯ ಬಣ್ಣ ಕೆಂಪಾಗಿರುತ್ತದೆ. ನಮ್ಮ ತಾಯಿ ಮತ್ತು 1 ನೇ ಆರೋಪಿ ಜಗಳ ಮಾಡುತ್ತಿದ್ದಾಗ, ನಾನು ಜಗಳ ಬಿಡಿಸಲು ಹೋಗಿರುತ್ತೇನೆ. ಇತರೆ 10 ಜನಗಳ ನಮ್ಮ ತಾಯಿ ಮತ್ತು 1 ನೇ ಆರೋಪಿ ಜಗಳವನ್ನು ಬಿಡಿಸಲು ಬಂದಿರುವುದಿಲ್ಲ. ಸಾಮಾನ್ಯವಾಗಿ ಜಗಳ ಆಡುವ ಸಮಯದಲ್ಲಿ ಪ್ಲಾಸ್ಟಿಕ್ ಬಿಂದಿಗೆಗಳು ಒಡೆದು ಹೋಗುತ್ತವೆ ಎಂದರೆ, ಸಾಕ್ಷಿಯು ಬೆಂಡಾಗುತ್ತದೆ, ಆದರೆ ಒಡೆದು ಹೋಗುವುದಿಲ್ಲ ಎಂದು ನುಡಿಯುತ್ತಾರೆ. ಆ ಬಿಂದಿಗೆಗಳನ್ನು ನ್ಯಾಯಾಲಯಕ್ಕಾಗಲೀ, ಪೋಲಿಸರಿಗಾಗಲೀ ನೀಡಿರುವುದಿಲ್ಲ. ನಾನು ಮತ್ತು ನನ್ನ ತಾಯಿ ಹೇಳಿರುವ ರೀತಿಯಲ್ಲಿ

ಆರೋಪಿಗಳು ನಮ್ಮ ಮೇಲೆ ಬಿಂದಿಗೆಯಿಂದ ಹಲ್ಲೆ ಮಾಡಿರುವುದಿಲ್ಲ. ಆದ್ದರಿಂದ ಅಲ್ಲಿರುವ ವ್ಯಕ್ತಿಗಳು ಜಗಳವನ್ನು ಬಿಡಿಸಲು ಬಂದಿರುವುದಿಲ್ಲ ಮತ್ತು ಬಿಂದಿಗೆಗಳನ್ನು ಕೂಡ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಸದರಿ ಬೋರ್ ವೆಲ್ ಊರಿನ ಒಳಗಡೆ ಇರುತ್ತದೆ. ಬೋರ್ ವೆಲ್ ನಿಂದ 2 ನೇ ಆರೋಪಿ ಕೆಲಸ ಮಾಡುತ್ತಿದ್ದ ತೋಟ 10 ಹೆಜ್ಜೆ ದೂರವಿರುತ್ತದೆ. ಸದರಿ ತೋಟ ಮೆಂಬರ್ ಮಂಜುನಾಥ್ ರವರಿಗೆ ಸೇರಿರುತ್ತದೆ ಮತ್ತು ಸದರಿ ತೋಟದಲ್ಲಿ ಟಮೋಟೋ ಬೆಳೆ ಬೆಳೆಯುತ್ತಿದ್ದರು. 2 ನೇ ಆರೋಪಿ ಪಕ್ಕದ ತೋಟದಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಅಲ್ಲಿಂದ ದೊಣ್ಣೆಯನ್ನು ಎತ್ತಿಕೊಂಡು ಬಂದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಗಲಾಟೆ ಆಗಿದೆ ಎಂದು ಹೇಳಿರುವ ಸಮಯದಲ್ಲಿ ಸುಮಾರು 5-6 ಜನ ಊರಿನವರು ಸೇರಿದ್ದರು. ಸದರಿ 5-6 ಜನದಲ್ಲಿ ಮೆಂಬರ್ ಮಂಜುನಾಥ್ ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ. ಮೆಂಬರ್ ಮಂಜುನಾಥ್ ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ.

ನ್ಯಾಯಾಲಯದ ಮುಂದೆ ಇರುವ ಮು.ಮಾಲು-1 ಅನ್ನು ತೆಗೆದುಕೊಂಡು ತಲೆಗೆ ಹೊಡೆದರೆ ಯಾವುದೇ ವ್ಯಕ್ತಿ ಉಳಿಯುವುದಿಲ್ಲ ಎಂದರೆ ಸರಿಯಲ್ಲ. ದೊಣ್ಣೆಯ ಮುಂದಿನ ಭಾಗದಿಂದ ನನ್ನ ತಲೆಗೆ ಹೊಡೆದಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಮು.ಮಾಲು-1 ದೂಳಾಗಿರುವುದಿಲ್ಲ. ಆ ದಿನ ರಕ್ತದಲ್ಲಿ ಮುಳುಗಿರುವ ಶರ್ಟ್ ಅನ್ನು ನಾನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಮತ್ತು ಸದರಿ ಶರ್ಟ್ ಅನ್ನು ಪೋಲಿಸರು ವಿಚಾರಣೆಗೆ ಬಂದಂತಹ ಸಮಯದಲ್ಲಿ

ನಾನು ಪೋಲಿಸರ ವಶಕ್ಕೆ ನೀಡಿರುತ್ತೇನೆ. ನಾನು ಮತ್ತು ನನ್ನ ತಾಯಿ ಆಸ್ಪತ್ರೆಗೆ ನಡೆದುಕೊಂಡು ಹೋಗಿರುತ್ತೇವೆ. ದಿ:13.03.2017 ರಲ್ಲಿ ನಾನು ಆಸ್ಪತ್ರಗೆ ಚಿಕಿತ್ಸೆಗೆ ಹೋಗಿರುತ್ತೇನೆ. ನಾನು ಆಸ್ಪತ್ರೆಗೆ ಹೋದಾಗ ಸುಮಾರು 9:00 ಗಂಟೆ ಆಗಿತ್ತು. ನನಗೆ ಆಸ್ಪತ್ರೆಯಲ್ಲಿ ಒಂದೂವರೆ ಗಂಟೆ ಚಿಕಿತ್ಸೆ ನೀಡಿರುತ್ತಾರೆ. ಆಸ್ಪತ್ರೆಗೆ ನಾವೇ ಹೋಗಿರುತ್ತೇವೆ. ನಾನು, ನನ್ನ ತಾಯಿ ಮತ್ತು ನನ್ನ ತಂದೆ ಆಸ್ಪತ್ರೆಗೆ ಹೋಗಿರುತ್ತೇವೆ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವ ರೀತಿ ಆರೋಪಿಯ ಮೇಲೆ ಯಾವುದೇ ರೀತಿಯ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಗಲಾಟೆ ಆದಂತಹ ಸಮಯದಲ್ಲಿ ನನ್ನ ತಂದೆ ಸ್ಥಳದಲ್ಲಿರಲಿಲ್ಲ. ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ನಮ್ಮ ತಾಯಿ ಆರೋಪಿಗಳ ವಿರುದ್ದ ಸುಳ್ಳು ದೂರುನ್ನು ನೀಡಿರುತ್ತಾರೆ ಮತ್ತು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾಲು-1 ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿಯಲ್ಲ, ಈ ಪ್ರಕರಣಕ್ಕೋಸ್ಕರ ಮು.ಮಾಲು-1 ಅನ್ನು ನಾವು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪೋಲಿಸರ ಮಾತು ಕೇಳಿ ಮು.ಮಾಲು-1 ಅನ್ನು ಸೃಷ್ಟಿ ಮಾಡಿಕೊಂಡಿರುತ್ತಿರಾ ಮತ್ತು ಈ ಪ್ರಕರಣಕ್ಕೂ ಮು.ಮಾಲು-1 ಕ್ಕೂ ಮತ್ತು ಆರೋಪಿಗಳಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾವು ಮತ್ತು ಆರೋಪಿಗಳು ದೂರದಿಂದ ಸಂಬಂಧಿಕರಾಗಬೇಕು ಎಂದರೆ ಸರಿಯಲ್ಲ. ಆರೋಪಿಗಳ ಮನೆಯಿಂದ ನಮ್ಮ ಮನೆಗೆ ಹೆಣ್ಣು ತೆಗೆದುಕೊಳ್ಳಬೇಕು ಎಂಬ ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ನಮಗೂ ಮತ್ತು ಆರೋಪಿಗಳಿಗೂ ಯಾವುದೇ ಮನಸ್ತಾಪ ಇರಲಿಲ್ಲ. ಚಾ.ಸಾ.1 ರವರು ಈ ಪ್ರಕರಣವನ್ನು ಬಿಟ್ಟು, ಇನ್ನು ಎಷ್ಟು ಪ್ರಕರಣವನ್ನು ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಇದೇ ನ್ಯಾಯಾಲಯದಲ್ಲಿ ನನ್ನ ತಾಯಿ

ಸಿ.ಸಿ.ನಂ.8308/2022 ರಂತೆ ಪ್ರಕರಣವನ್ನು ಹೂಡಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ 2 ನೇ ಆರೋಪಿ ಸಾಕ್ಷಿದಾರರಾಗಿರುತ್ತಾರೆ ಎಂದರೆ ಸರಿ. ನಮ್ಮ ತಾಯಿಯ ಮೇಲೆ ಕ್ರಿಮಿನಲ್ ಪ್ರಕರಣಗಳು ಇರುತ್ತವೆ ಎಂದರೆ ಸರಿಯಲ್ಲ. ಬೆಂಗಳೂರಿನಲ್ಲಿ ನಮ್ಮ ತಾಯಿ ಕ್ರಿಮಿನಲ್ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದರು ಎಂದರೆ ಸಾಕ್ಷಿಯು ನನ್ನ ಅಮ್ಮನಿಗೆ ಅನ್ಯಾಯ ಆಗಿ, ನ್ಯಾಯಾಂಗ ಬಂಧನದಲ್ಲಿದ್ದರು ಎಂದು ನುಡಿಯುತ್ತಾರೆ. ನನ್ನ ಅಮ್ಮ ಸುಮಾರು 1 ತಿಂಗಳ ಕಾಲ ನ್ಯಾಯಾಂಗ ಬಂಧನದಲ್ಲಿದ್ದರು. ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ನನ್ನ ತಾಯಿಗೆ ಸಹಾಯ ಮಾಡುವ ಉದ್ದೇಶದಿಂದ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಎಂ ಒ

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹೊಸಕೋಟೆ.